ಕನ್ನಡ ಪ್ರಭ, 12-11-2016, Page no: 2

# ಪಶ್ಚಿಮಘಟ್ಟ ರಕ್ಷಣೆಗಾಗಿ ಕೆರೆ ಸಮ್ಮೇಳನ

## 18 ವರ್ಷಗಳಿಂದ ಆಯೋಜನೆ । ಶಿರಸಿಗೆ 8ನೇ ಬಾರಿ ಆತಿಥ್ಯ । ಜಲಮೂಲ ರಕ್ಷಣೆ ಜಾಗೃತಿಗೆ ನಾಳೆಯಿಂದ ಸಮ್ಮೇಳನ

• ವಿಶ್ವಾಮಿತ್ರ ಹೆಗಡೆ

**ಕನ್ನಡಪ್ರಭ ವಾರ್ತೆ, ಶಿರಸಿ, ನ. 11**

ಜೀವ ವೈವಿಧ್ಯ ತಾಣವಾಗಿದ್ದ ಪಶ್ಚಿಮ ಘಟ್ಟ ಪ್ರದೇಶ ಬಯಲು ಸೀಮೆಯಂತಾಗುತ್ತಿದೆ. ಹವಾಮಾನ ವೈಪರೀತ್ಯ ಪದೇ ಪದೇ ಸಂಭವಿಸುತ್ತಿದೆ. ನೀರಿನ ಮೂಲಗಳು ಬತ್ತುತ್ತಿವೆ. ಬೇಸಿಗೆಯಲ್ಲಿ ನೀರಿಗೆ ಹಾಹಾಕಾರ ಏಳುತ್ತಿರುವುದನ್ನು ಕಾಣಬಹುದಾಗಿದೆ. ಈ ಎಲ್ಲ ಕಾರಣಗಳಿಗಾಗಿ ಕೆರೆ ಸಮ್ಮೇಳನ ಮಹತ್ವ ಪಡೆದುಕೊಂಡಿದೆ.

ಕಳೆದ 18 ವರ್ಷಗಳಿಂದ ಕೆರೆ ಸಮ್ಮೇಳನ ನಡೆಸಲಾಗುತ್ತಿದೆ. ವಿಶೇಷವಾಗಿ ಭಾರತೀಯ ವಿಜ್ಞಾನ ಕೇಂದ್ರ ಕೆರೆ ಸಮ್ಮೇಳನಕ್ಕೆ ಒತ್ತು ನೀಡಿದೆ. ಪ್ರಥಮ ಕೆರೆ ಸಮ್ಮೇಳನ 1998ರಲ್ಲಿ ನಡೆಯಿತು. ಈಗ ಶಿರಸಿಯಲ್ಲಿ ನಡೆಯಲಿರುವ ಸಮ್ಮೇಳನ 8ನೆಯದ್ದು. ಒಡಿಶಾದ ಭುವನೇಶ್ವರದಲ್ಲಿ ಪ್ರಥಮ ಕೆರೆ ಸಮ್ಮೇಳನ ನಡೆಯಿತು. ಕೇರಳದ ಕೊಚ್ಚಿಯೂ ಸೇರಿದಂತೆ ಕರ್ನಾಟಕದ ಬೆಂಗಳೂರು ಹೀಗೆ ದೇಶದ ವಿವಿಧೆಡೆ ನಡೆದ ಸಮ್ಮೇಳನದ ಫಲಶ್ರುತಿ ಉತ್ತಮ ಫಲಿತಾಂಶ ಕೊಟ್ಟಿದೆ. ಫಲವತ್ತಾದ ಭೂಮಿಗಳು ಬರಡಾಗುತ್ತಿದೆ. ಜೌಗು ಪ್ರದೇಶಗಳು ಬಂಜರಾಗುತ್ತಿದೆ. ಜಲಮೂಲಗಳು ಕಣ್ಮರೆಯಾಗುತ್ತಿರುವ ಅಪಾಯ ನಮ್ಮೆದುರಿಗಿದೆ. ಕೆರೆಗಳು ಹೂಳು ತುಂಬುತ್ತಿವೆ, ಮಲಿನಗೊಳ್ಳುತ್ತಿವೆ. ಅತಿಕ್ರಮಣಕ್ಕೊಳಗಾಗುತ್ತಿವೆ. ಶೇ. 50ರಷ್ಟು ಕೆರೆಗಳು ಈಗಾಗಲೇ ಕಣ್ಮರೆಯಾಗಿವೆ. ಹಾಗಾಗಿ ಸಾರ್ವಜನಿಕರಲ್ಲಿ ಕೆರೆಯ ಮಹತ್ವದ ಅರಿವು ಉಂಟಾಗುವುದರಜತೆಗೆಸರ್ಕಾರಕೆರೆಸಂರಕ್ಷಣೆಯಲ್ಲಿ ಕಠಿಣ ನಿಲುವು ತಳೆಯ ಬೇಕಾಗಿದೆ.

ಭಾರತೀಯ ವಿಜ್ಞಾನ ಸಂಸ್ಥೆಯ ಜತೆಯಲ್ಲಿ ವೃಕ್ಷ-ಲಕ್ಷ ಆಂದೋಲನ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಸ್ವರ್ಣವಲ್ಲಿ ಮಹಾಸಂಸ್ಥಾನ, ಭೈರುಂಭೆಯ ಶಾರದಾಂಬಾ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಶಿರಸಿಯ ಲಯನ್ಸ್ ಸಂಸ್ಥೆ, ಶೀಗೇಹಳ್ಳಿಯ ಗ್ರಾಮ ಅರಣ್ಯ ಸಮಿತಿ ಸಹಯೋಗದಲ್ಲಿ ಈ ಸಲದ ಕೆರೆ ಸಮ್ಮೇಳನ ಸೋಂದಾ



ಸ್ವರ್ಣವಲ್ಲಿ ಮಠದಲ್ಲಿ ಆಯೋಜನೆಗೊಂಡಿದೆ. ಸ್ವರ್ಣವಲ್ಲಿ ಮಠದಲ್ಲಿ ಸಮ್ಮೇಳನಕ್ಕೆ ಚಾಲನೆ ದೊರೆತರೆ, ಎರಡನೇ ದಿನದ ಕಾರ್ಯಕ್ರಮ ಶಿರಸಿಯ ಲಯನ್ಸ್ ಶಿಕ್ಷಣ ಸಂಸ್ಥೆಯ ಆವಾರದಲ್ಲಿ ನಡೆಯಲಿದೆ. ಮೂರನೇ ಮತ್ತು ಸಮಾರೋಪ ಸಮಾರಂಭ ಭೈರುಂಭೆಯ ಶಾರದಾಂಬಾ ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದು ಸಮ್ಮೇಳನದ ವೈಶಿಷ್ಟ್ಯವಾಗಿದೆ. ಮೂರು ದಿನವೂ ಮೂರು ಬೇರೆ ಪ್ರದೇಶಗಳಲ್ಲಿ ಸಮ್ಮೇಳನ ಆಯೋಜನೆಗೊಳ್ಳುವುದರ ಮೂಲಕ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಸಾರ್ವಜನಿಕರ ಜತೆಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಂಡಿರುವುದು ಭವಿಷ್ಯದ ದೃಷ್ಟಿಯಿಂದ ಹೆಚ್ಚು ಪ್ರಯೋಜನವಾಗಲಿದೆ.

ರಾಜ್ಯದಲ್ಲಿ ಎಷ್ಟು ಕೆರೆಗಳಿದ್ದವು, ಈಗೆಷ್ಟಿವೆ. ಕಣ್ಮರೆಯಾದ ಕೆರೆಗಳೆಷ್ಟು, ಅತಿಕ್ರಮಣಕ್ಕೊಳಗಾದ ಕೆರೆಗಳು, ಹೂಳು ತುಂಬಿರುವ ಕೆರೆಗಳು, ತ್ಯಾಜ್ಯ ತುಂಬಿರುವ ಕೆರೆಗಳು, ಬಳಕೆಗೆ ಯೋಗ್ಯವಲ್ಲದ

**ಬೇಡ್ತಿ ನದಿಯಂತಹ ನದಿಯೇ ಮಲಿನಗೊಂಡು ಉಪಯೋಗಿಸಲು ಬಾರದ ಸ್ಥಿತಿಗೆ ತಲುಪಿದೆ. ಕಾಡು ನಾಶ, ಜಲ ನಾಶ, ಭೂಮಿಗೆ ಕನ್ನ ಹಾಕುವ ಕಾರಣಗಳಿಂದಾಗಿ ವಾತಾವರಣ ಹದಗೆಡುತ್ತಿದೆ.**

ಕೆರೆಗಳು, ಮಲಿನಗೊಂಡಿರುವ ಕೆರೆಗಳ ಸುತ್ತಲಿನ ಬಾವಿಗಳ ನೀರಿನ ಸ್ಥಿತಿ, ಆ ಪ್ರದೇಶದ ಬೆಳೆಗಳ ಸ್ಥಿತಿ ಹೀಗೆ ಹತ್ತು ಹಲವು ಪೂರಕ ಮತ್ತು ಮಾರಕ ಪರಿಣಾಮಗಳ ಕುರಿತು ಅಧ್ಯಯನ ನಡೆಸಲಾಗಿದೆ. ದಿನನಿತ್ಯದ ಬದುಕಿನ ತಲ್ಲಣಗಳ ಕುರಿತಂತೆಯೂ ಬೆಳಕು ಚೆಲ್ಲಬಹುದಾದ ಮಾಹಿತಿಗಳು ಲಭ್ಯವಾಗಿದೆ. ಕೆರೆ ಸಮ್ಮೇಳನ ಮಹತ್ವ ಪಡೆದುಕೊಳ್ಳುವುದೇ ಈ ಸಂಗತಿಗಳಿಗಾಗಿ.

**ಭಾರಿ ಯೋಜನೆಗಳಿಂದ ನಷ್ಟ:** ಪಶ್ಚಿಮ ಘಟ್ಟ ಪ್ರದೇಶವೆಂದರೆ ದಕ್ಷಿಣ ಭಾರತಕ್ಕೆ ಮಳೆ ಸುರಿಸುವ ಕಾಡುಗಳನ್ನು ಹೊಂದಿರುವ ಪ್ರದೇಶವಾಗಿದೆ. ಈ ಪ್ರದೇಶದ ಮೇಲೆ ಅವ್ಯಾಹತವಾಗಿ ಅತ್ಯಾಚಾರವಾಗುತ್ತಿದೆ. ಭಾರಿ ಯೋಜನೆಗಳು ಘಟ್ಟ ಪ್ರದೇಶವನ್ನು ನಲುಗಿಸಿವೆ. ಇದರಿಂದಾಗಿ ಅದೆಷ್ಟೋ ಜಲಮೂಲಗಳು ಈಗಾಗಲೇ ಕಣ್ಮರೆಯಾಗಿವೆ. ಬೇಡ್ತಿ ನದಿಯಂತಹ ನದಿಯೇ ಮಲಿನಗೊಂಡು ಉಪಯೋಗಿಸಲು ಬಾರದ ಸ್ಥಿತಿಗೆ ತಲುಪಿದೆ. ಕಾಡು ನಾಶ, ಜಲ ನಾಶ, ಭೂಮಿಗೆ ಕನ್ನ ಹಾಕುವ ಕಾರಣಗಳಿಂದಾಗಿ ವಾತಾವರಣ ಹದಗೆಡುತ್ತಿದೆ. ಆಡಳಿತ ನಡೆಸುವವರಿಗೆ ನದಿ ತಿರುವಿನಂತಹ ಬೃಹತ್ ಯೋಜನೆಗಳೇ ಬೇಕು. ಕೆರೆಗಳ ಸಂರಕ್ಷಣೆ, ಅಭಿವೃದ್ಧಿ ಯೋಜನೆಗಳೇ ಅಲ್ಲ ಎನ್ನುವ ಮನೋಭಾವ. ಅರಣ್ಯ ಇಲಾಖೆ ಮತ್ತು ಜಲಾನಯನ ಇಲಾಖೆಗಳು ಅವೈಜ್ಞಾನಿಕ ಇಂಗು ಗುಂಡಿ, ಕೃಷಿ ಹೊಂಡಕ್ಕೆ ಸೀಮಿತಗೊಂಡಿವೆ. ಇವೂ ಕಡತಗಳಲ್ಲಷ್ಟೇ ಕಾಣುತ್ತವೆ. ನಿಗದಿತ ಗುರಿ ಸಾಧಿಸಲಾಗಿದೆ ಎನ್ನುವ ದಾಖಲೆಯೂ ತಯಾರಾಗುತ್ತದೆ. ಫಲಿತಾಂಶ ಮಾತ್ರ ಹೇಳಿಕೊಳ್ಳುವಂತಿಲ್ಲ.

**ಕೃಷಿ ಹೊಂಡ ನಿರ್ಮಾಣವಾಗಲಿ:** ವೈಜ್ಞಾನಿಕ ತಳಹದಿ ಮೇಲೆ ಇಂಗುಗುಂಡಿಗಳ ಮತ್ತು ಕೃಷಿ ಹೊಂಡಗಳ ನಿರ್ಮಾಣವಾಗಬೇಕಿತ್ತು. ಕೆರೆಗಳ ಸಂರಕ್ಷಣೆಗೆ ಯೋಜನೆ ಹಮ್ಮಿಕೊಳ್ಳಬೇಕಾಗಿತ್ತು. ಕೆರೆ ಹೂಳು ತೆಗೆಯುವುದರಲ್ಲೂ ನಿರ್ಲಕ್ಷ್ಯ, ಅವ್ಯವಹಾರ, ಭ್ರಷ್ಟಾಚಾರದ ವಾಸನೆ ರಾಚುತ್ತದೆ. ಹಳೆಯ ಕೆರೆಗಳ ಪುನಶ್ಚೇತನಕ್ಕೆ ಯೋಜನೆಗಳನ್ನು ರೂಪಿಸಿ, ಕೆರೆ ಕಟ್ಟಿದರೆ ವರ್ಷ ತುಂಬುವಷ್ಟರಲ್ಲಿ ನೀರು ಸೋರಿಹೋಗುವ ಸ್ಥಿತಿ. ಸರ್ಕಾರಿ ವ್ಯವಸ್ಥೆಯಡಿ ಕೆರೆಗಳ ಅಭಿವೃದ್ಧಿಯೂ ನಿರೀಕ್ಷಿತ ಮಟ್ಟದಲ್ಲಿ ನಡೆದಿಲ್ಲ. ಸಂರಕ್ಷಣೆಯಲ್ಲಂತೂ ಸಾಕಷ್ಟು ಹಿನ್ನಡೆ ಆಗಿದೆ. ಶಾಸಕರು, ಸಚಿವರು ತಮ್ಮ ಅನುದಾನದಿಂದ ನಿಧಿ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿಕೊಳ್ಳಲು ಕೆರೆ ಏರಿ ಮೇಲೆ ನಾಮಫಲಕ ಹಾಕಿಸಿಕೊಳ್ಳುತ್ತಾರೆ. ಗುದ್ದಲಿ ಪೂಜೆ ಮಾಡುತ್ತಾರೆ. ಆಮೇಲೆ ಕೆರೆಯತ್ತ ಕಣ್ಣೆತ್ತಿಯೂ ನೋಡುವುದಿಲ್ಲ. ನಮ್ಮ ಜನಪ್ರತಿನಿಧಿಗಳ ಬದ್ಧತೆಗೆ ಹಾಳು ಬೀಳುತ್ತಿರುವ ಕೆರೆಗಳೇ ಸಾಕ್ಷಿ. ಗ್ರಾಪಂ ಸದಸ್ಯನಿಂದ ಸಂಸದರವರೆಗೂ ಕೆರೆಗಳ ಅಭಿವೃದ್ಧಿಯ ಕಲ್ಪನೆಯೇ ಇಲ್ಲ. ಅಲ್ಲೊಬ್ಬರು, ಇಲ್ಲೊಬ್ಬರು ಕೆರೆಗಳು ಅಥವಾ ನೀರಿನ ಕುರಿತು ಕಾಳಜಿ ತೋರಿಸಿದ್ದಾರೆ, ಅಷ್ಟೇ.

ಜನಪ್ರತಿನಿಧಿಗಳು ನಾಮಫಲಕ ಮತ್ತು ಗುದ್ದಲಿಪೂಜೆಗೆ ಸೀಮಿತವಾಗಿರುವ ಪರಿಣಾಮ ಪಶ್ಚಿಮ ಘಟ್ಟದ ತಳದಲ್ಲಿ, ಮಲೆನಾಡಿನಲ್ಲಿ ನೀರಿಗಾಗಿ ಹಾಹಾಕಾರ ಉಂಟಾಗಿದೆ. ನೀರಿನ ಭಂಡಾರವೇ ಬರಿದಾಗುತ್ತಿರುವ ಸನ್ನಿವೇಶಕ್ಕೆ ರಾಜಕಾರಣಿಗಳ ಕೊಡುಗೆಯೂ ಸಾಕಷ್ಟಿದೆ. ಅನಿವಾರ್ಯವಾಗಿ ಸ್ವಯಂ ಸೇವಾ ಸಂಸ್ಥೆಗಳು, ಭಾರತೀಯ ವಿಜ್ಞಾನ ಸಂಸ್ಥೆಯಂತಹ ಸಂಶೋಧನಾ ವಿಭಾಗದವರು, ಸಾರ್ವಜನಿಕರ ಸಹಭಾಗಿತ್ವದಲ್ಲಿ ಕೆರೆ ಸಂರಕ್ಷಣೆಯ ಆಂದೋಲನವನ್ನೇ ಹಮ್ಮಿಕೊಳ್ಳುತ್ತಿದ್ದಾರೆ. ತನ್ಮೂಲಕ ಮುಂದಿನ ಪೀಳಿಗೆಗೆ ಶುದ್ಧ ಕುಡಿಯುವ ನೀರು, ಪರಿಶುದ್ಧ ಗಾಳಿ ಸೇರಿದಂತೆ ಸುಂದರ ಪರಿಸರ ನಿರ್ಮಿಸುವ ಕನಸು ಹೊತ್ತು ಮುಂದಡಿಯಿಟ್ಟಿರುವುದು ಪ್ರಸ್ತುತದ ಅಗತ್ಯ.

### ವರ್ಷದಿಂದ ತಯಾರಿ

ಕಳೆದೊಂದು ವರ್ಷದಿಂದ ಕೆರೆ ಸಮ್ಮೇಳನದ ಪೂರ್ವ ತಯಾರಿ ನಡೆಯುತ್ತಿದೆ. ರಾಜ್ಯದ ವಿವಿಧ ಪ್ರದೇಶಗಳ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಾಗುತ್ತಿದ್ದು, ಅವರಿಂದಲೇ ಅಧ್ಯಯನ ವರದಿ ಸಿದ್ಧಪಡಿಸಲಾಗುತ್ತಿದೆ. ವಿದ್ಯಾರ್ಥಿಗಳು ಆಸಕ್ತಿಯಿಂದ ಅಧ್ಯಯನದಲ್ಲಿ ತೊಡಗಿಕೊಂಡಿದ್ದಾರೆ. ತಮ್ಮ ಸುತ್ತಲಿನ ಪರಿಸರ, ನೀರಿನ ಮೂಲ ಸೇರಿದಂತೆ ನೀರಲ್ಲಿ ವಾಸಿಸುವ ಜಲಚರಗಳ ಅಧ್ಯಯನವೂ ನಡೆದಿದೆ. ತ್ಯಾಜ್ಯ, ಮಲಿನಗಳಿಂದಾಗಿ ಸುತ್ತಲಿನ ಪರಿಸರ ಮತ್ತು ಬಾವಿಯ ನೀರು, ಜನಜೀವನದ ಆರೋಗ್ಯ ಈ ಮುಂತಾದವುಗಳ ಕುರಿತು ಮಾಹಿತಿ ಕಲೆ ಹಾಕಲಾಗಿದೆ.